ನಾಂದಿಪದ

# ಅರ್ಥಪೂರ್ಣ ಅರ್ಧಶತಮಾನ

**ಸಾಂ**ಸ್ಕೃತಿಕಲೋಕದಲ್ಲಿ ಅಚ್ಚಳಿಯದ, ತನ್ನದೇ ಛಾಪಿನ ವಿಶಿಷ್ಟ ಹೆಜ್ಜೆಗುರುತುಗಳಿರುವ 'ಮಯೂರ' ಈ ಸಂಚಿಕೆಯೊಂದಿಗೆ 50 ವರ್ಷಗಳನ್ನು ಪೂರೈಸುತ್ತಿದೆ. ಅರ್ಧಶತಮಾನದ ಸಾರ್ಥಕ ಮತ್ತು ಅರ್ಥಪೂರ್ಣ ಪ್ರಯಾಣ ಇದು. ಇದರಲ್ಲಿ ಓದುಗರು, ಲೇಖಕರು, ಕಲಾವಿದರು ಜೊತೆಯಾಗಿದ್ದಾರೆ. ನೂರಾರು ಕ್ರಿಯಾಶೀಲ ಮನಸ್ಸುಗಳು ಪತ್ರಿಕೆಯ ಹಿಂದೆ ಕೆಲಸ ಮಾಡಿವೆ. ಈ ಎಲ್ಲ ಆಕರ್ಷಕ ಗರಿಗಳು ಸೇರಿಯೇ 'ಮಯೂರನೃತ್ಯ' ಸಾಧ್ಯವಾಗಿದೆ. ಹಲವು ಬಗೆಯ ಚಿಂತನೆಗಳಿಗೆ, ಕತೆಗಳಿಗೆ, ಬರಹಗಳಿಗೆ, ಸಂವಾದಗಳಿಗೆ ಪತ್ರಿಕೆ ಸಾಕ್ಷಿಯಾಗಿದೆ. ಅನೇಕ ಪ್ರಯೋಗಗಳಿಗೆ ವೇದಿಕೆಯಾಗಿದೆ. ಕನ್ನಡದ ಬಹುಪಾಲು ಪ್ರಮುಖ ಲೇಖಕರ ಬರಹಗಳನ್ನು ಪ್ರಕಟಿಸಿದ ಹೆಮ್ಮೆ ಪತ್ರಿಕೆಯದು. ಇದು ಮಾತ್ರವಲ್ಲ, ಪತ್ರಿಕೆ ತಲೆಮಾರುಗಳ ಸಾಹಿತ್ಯದ ರುಚಿಯನ್ನು ರೂಪಿಸಿದೆ, ಪೋಷಿಸಿದೆ. ಸಾಹಿತ್ಯದ ಹಲವು ಪಲ್ಲಟಗಳನ್ನು ಪತ್ರಿಕೆಯ ಹಿಂದಣ ಹೆಜ್ಜೆಗಳಲ್ಲಿ ಕಾಣಬಹುದು; ಜೊತೆಗೆ ಹೊಸ ಮೈ ಪಡೆಯುತ್ತ ಬಂದ ಕನ್ನಡ ಭಾಷೆಯನ್ನು ಕೂಡ. ಅಸಂಖ್ಯ ಮನಸ್ಸುಗಳನ್ನು ಮುಟ್ಟಿದ, ಪೊರೆದ, ಬೆಳೆಸಿದ ಪತ್ರಿಕೆಯ ದೀರ್ಘ ನಡಿಗೆ ಕನ್ನಡ ಪತ್ರಿಕಾರಂಗದಲ್ಲಿ ಒಂದು ಮೈಲಿಗಲ್ಲು; ಸಾಂಸ್ಕೃತಿಕವಾಗಿ ದಾಖಲಾರ್ಹ.

ಚುರುಕು ಚಳಿಯಲ್ಲಿ ಉಗುರು ಬೆಚ್ಚಗಿನ ಬರಹಗಳನ್ನು ಒಳಗೊಂಡ ವರ್ಷದ ಕೊನೆಯ ಸಂಚಿಕೆ ನಿಮ್ಮ ಕೈಯಲ್ಲಿದೆ. ವರ್ಷದ ಕೊನೆಯ ತಿಂಗಳು ಡಿಸೆಂಬರ್ ಅನೇಕ ಅನುಭವಗಳ ಮೊತ್ತವಾಗಿರುವಂತೆಯೇ ಮುಂದಿನ ಹೊಸ ಹಂಬಲ, ಕನಸುಗಳ ಬೀಜವನ್ನೂ ಒಡಲಲ್ಲಿ ಇಟ್ಟುಕೊಂಡ ತಿಂಗಳೂ ಹೌದು. ಮನುಷ್ಯನ ಬಾಳಿನಲ್ಲಿ ಕೊನೆಗೆ ಉಳಿಯುವುದೇನು, ಅವರು ಯಾವುದಕ್ಕಾಗಿ ಜೀವಿಸುತ್ತಾರೆ ಎಂಬ ಹುಡುಕಾಟ ಈ ಬಾರಿಯ ಅನೇಕ ಕತೆಗಳ ವಸ್ತು. ಅದನ್ನು ಆಯಾ ಲೇಖಕರು ನಿರ್ವಹಿಸಿರುವ ರೀತಿ ಮಾತ್ರ ಬೇರೆ ಬೇರೆಯಾಗಿದೆ. ಎಲ್ಲ ಕತೆಗಳೂ ಮನುಷ್ಯ ಕಳೆದ, ಜೀವಿಸಿದ ಕಾಲದ ದಾಖಲೆಗಳೇ ಆಗಿವೆ. ಇದಕ್ಕೆ ಈ ಸಂಚಿಕೆಯ ಕತೆಗಳೂ ಹೊರತಲ್ಲ. ಇವುಗಳ ಜೊತೆಗೆ ಈ ಬಾರಿ ಸಾಹಿತ್ಯಕ್ಕಾಗಿನ ನೊಬೆಲ್ ಪುರಸ್ಕಾರ ಪಡೆದ ಜಪಾನಿ ಲೇಖಕ ಕಜವೊ ಇಶಿಗಾರೊನ ಸಾಹಿತ್ಯ ಬದುಕಿನ ಕುರಿತ ವಿಶೇಷ ಲೇಖನವಿದೆ.

**ಸಂದೀಪ ನಾಯಕ**

